ದಿನಾಂಕಃ 07.02.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ವಾದಿಯರ ಪರ ಶ್ರೀ. ಡಿ.ಎಸ್.ಬಿ ವಕೀಲರಿಂದಃ</u>**

ನನ್ನ ತಂದೆಗೆ ವಯಸ್ಸಾಗಿದ್ದು, ಅವರಿಗೆ ಸರಿಯಾಗಿ ಕಿವಿ ಕೇಳಿಸುವುದಿಲ್ಲ, ಮೊಣಕಾಲು ನೋವು ಇರುವ ಬಗ್ಗೆ ಆಸ್ಪತ್ರೆಗೆ ತೋರಿಸಿದ್ದೇವೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನಿಜ. ನನ್ನ ತಂದೆಗೆ ಆರೋಗ್ಯ ಸರಿ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ನಿಜಾಂಶ ಗೊತ್ತಾಗುತ್ತದೆಂದು ತಿಳಿದು ಉದ್ದೇಶಪೂರ್ವಕವಾಗಿ ಆತನಿಂದ ಒಟ್ಟು ಮುಕ್ತಿಯಾರ ಪತ್ರವನ್ನು ಬರೆಸಿಕೊಂಡು ಆತನ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆಗೆ 85 ವರ್ಷ ವಯಸ್ಸು ಇರುತ್ತದೆಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ತಂದೆ ಆರೋಗ್ಯವಾಗಿದ್ದು, ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಲು ತೊಂದರೆ ಇರುವುದಿಲ್ಲ ಎಂದರೆ ಸರಿಯಲ್ಲ.

ವಾದಿ ತನ್ನ ಪರವಾಗಿ ಹಾಜರುಪಡಿಸಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿ ಸರ್ವೆ ನಂಬರ 71/1, ಕ್ಷೇತ್ರ 04 ಎಕರೆ 09 ಗುಂಟೆ ಜಮೀನು ಬೆಟಗೇರಿ ಗ್ರಾಮದಲ್ಲಿ ಇರುತ್ತದೆ. ಸದರಿ ಜಮೀನು ನನ್ನ ತಂದೆಯ ಹೆಸರಿಗೆ ಇರುತ್ತದೆ. ನಮ್ಮ ತಂದೆಗೆ ಆರೋಗ್ಯ ಸರಿ ಇರದೇ ಇರುವ ಕಾರಣ ಆತನಿಗೆ ವ್ಯವಸಾಯ ಮಾಡಲು ಆಗುವುದಿಲ್ಲ ಎಂದು ನೀವು ಆತನ ಹೆಸರಿಗೆ ಇರುವ ಜಮೀನನ್ನು ನಿಮ್ಮ ಹೆಸರಿಗೆ ಬದಲಾವಣೆ ಮಾಡಿಕೊಳ್ಳಲು ತೊಂದರೆ ಇತ್ತಾ? ಎಂದರೆ ಸಾಕ್ಷಿಯು ನಾವು ಮೂವರು ಜನ ಅಣ್ಣತಮ್ಮಂದಿರರು ಇದ್ದು, ಹಿರಿಯರ ಹೆಸರಿಗೆ ಆಸ್ತಿ ಇರಲಿ ಎಂದು ನಮ್ಮ ಹೆಸರಿಗೆ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ.

ವಾದಿ ಮತ್ತು ನಮ್ಮ ತಂದೆ ಪ್ರತಿವಾದಿಯ ಮದ್ಯೆ ಆದ ವ್ಯವಹಾರದ ಬಗ್ಗೆ ನಮ್ಮ ತಂದೆ ಒಂದು ವರ್ಷದ ನಂತರ ನಮಗೆ ತಿಳಿಸಿರುತ್ತಾರೆ. ಸಾಕ್ಷಿ ಮುಂದುವರೆದು ನಮ್ಮ ತಂದೆ ವಾದಿಯಿಂದ ಪಡೆದ 4 ಲಕ್ಷ ರೂ ಕೈಗಡ ಹಣಕ್ಕೆ ಭದ್ರತೆಗಾಗಿ ಬಿನ್ ಕಬ್ಜಾ ಖರೀದಿ ಕರಾರು ಪತ್ರವನ್ನು ಬರೆಸಿಕೊಂಡ ಬಗ್ಗೆ ಗೊತ್ತಾಗಿರುತ್ತದೆಂದು ನುಡಿಯುತ್ತಾರೆ. ಸದರಿ ನಮ್ಮ ತಂದೆಯವರು ವಾದಿಯಿಂದ ಕೈಗಡ ಸಾಲ ಪಡೆದುಕೊಂಡಿದ್ದು, ಯಾವುದೇ ರೀತಿ ಖರೀದಿ ಕರಾರು ಪತ್ರ ಬರೆದುಕೊಟ್ಟಿರುವುದಿಲ್ಲ ಎಂದು ಹೇಳಿ ಒಂದು ವರ್ಷದ ನಂತರ ನಾವು ಯಾವುದೇ ಲಿಖಿತವಾಗಿ ನೋಟೀಸನ್ನು ವಾದಿಗೆ ನೀಡಿರುವುದಿಲ್ಲ. ವಾದಿಯು ನಮ್ಮ ತಂದೆಗೆ ಮೋಸದಿಂದ ಖರೀದಿ ಕರಾರು ಪತ್ರ ಬರೆಸಿಕೂಂಡಿರುತ್ತಾಳೆಂದು ಅವಳ ವಿರುದ್ಧ ನಾವು ದೂರು ಕೊಟ್ಟಿರುವುದಿಲ್ಲ ಆದರೆ ಹಿರಿಯರ ಮೂಲಕ ವ್ಯವಹಾರವನ್ನು ಬಗೆಹರಿಸಿಕೊಳ್ಳುವ ಬಗ್ಗೆ ಮಾತನಾಡಿಕೊಂಡಿರುತ್ತೇವೆ. ನೀಲಪ್ಪ ಬಸಪ್ಪ ಪಾರವಾತ್ಯಾರ, ನಾನು, ನಮ್ಮ ತಂದೆ ಹಾಗೂ ನನ್ನ ತಮ್ಮ ಸೇರಿಕೊಂಡು ವಾದಿಯ ಮನೆಗೆ ಹೋಗಿ ರೂ.4 ಲಕ್ಷ ಹಣ ಹಾಗೂ ಅದರೊಂದಿಗೆ ಒಂದು ವರ್ಷದ ಬಡ್ಡಿಯನ್ನು ಸೇರಿಸಿ ಕೊಟ್ಟಿರುತ್ತೇವೆ. ಸದರಿ ಹಣ ಹಾಗೂ ಬಡ್ಡಿ ಕೊಟ್ಟ ಬಗ್ಗೆ ವಾದಿಯಿಂದ ಯಾವುದೇ ಪಾವತಿ ಬೇಸ್ಮಿಯನ್ನು ಪಡೆದಿರುವುದಿಲ್ಲ. ವಾದಿಯಿಂದ ನಮ್ಮ ತಂದೆ ಕೈಗಡ ಸಾಲವನ್ನು ಪಡೆದುಕೊಳ್ಳುವ ಯಾವುದೇ ಅವಶ್ಯಕತೆ ಇರಲಿಲ್ಲ.

ದಾವಾ ಆಸ್ತಿಯ 02 ಎಕರೆ ಜಮೀನಿನ ಪೂರ್ವಕ್ಕೆ- ನಮ್ಮ ಉಳಿದ ಆಸ್ತಿ , ಪಶ್ಚಿಮಕ್ಕೆ- ಕಟಾವಕರವರ ಜಮೀನು, ದಕ್ಷಿಣಕ್ಕೆ- ರಸ್ತೆ ಹಾಗೂ ಉತ್ತರಕ್ಕೆ- ಹಳ್ಳ ಇರುತ್ತದೆ. ದಿ.14.12.2017 ರಂದು ಖರೀದಿ ಪತ್ರ ನೊಂದ ಆಗಿರುತ್ತದೆಂದರೆ ನಿಜ. ಸದರಿ ಪತ್ರಕ್ಕೆ ಸಾಕ್ಷಿಯಾಗಿ ರಾಮಯ್ಯಾ ವಿಭಾುತಿ ಹಾಗೂ ಶಿವಪ್ಪ ಕತ್ತಿ ಎನ್ನುವವರು ಸಹಿ

ಹಾಕಿರುತ್ತಾರೆಂದರೆ ನಿಜ. ಅದೇ ರೀತಿ ನನ್ನ ತಂದೆ ಹೆಬ್ಬೆಟ್ಟಿನ ಗುರುತು ಹಾಕಿದ್ದು ಹಾಗೂ ವಾದಿ ಸಹಸದರಿ ಪತ್ರಕ್ಕೆ ಸಹಿ ಹಾಕಿರುತ್ತಾಳೆಂದರೆ ನಿಜ. ನಿಪಿ.1 ರಲ್ಲಿರುವ ನಮ್ಮ ತಂದೆಯ ಭಾವಚಿತ್ರ ಇರುತ್ತದೆಂದರೆ ನಿಜ. ಅದೇ ರೀತಿ ನಿಪಿ.1 ರಲ್ಲಿ ವಾದಿಯ ಭಾವಚಿತ್ರ ಸಹ ಇರುತ್ತದೆಂದರೆ ನಿಜ. ನಿಪಿ.1 ರಲ್ಲಿ ದಾವಾ ಆಸ್ತಿಯ ಖರೀದಿ ಕಿಮ್ಮತ್ತು ರೂ.8 ಲಕ್ಷ 20 ಸಾವಿರ ಎಂದು ಬರೆದಿರುತ್ತಾರೆಂದರೆ ನಿಜ. ಅದೇ ರೀತಿ ನಿಪಿ.1 ರಲ್ಲಿ 08 ಲಕ್ಷ ರೂ. ಮುಂಗಡ ಹಣ ಎಂದು ನಮೂದಿಸಿರುತ್ತಾರೆಂದರೆ ನಿಜ. ಅದೇ ರೀತಿ ಉಳಿದ 20 ಸಾವಿರ ರೂ. ಮೊತ್ತವನ್ನು ಖರೀದಿ ಕಾಲಕ್ಕೆ ಕೊಡುವ ಬಗ್ಗೆ ಬರೆದಿರುತ್ತಾರೆಂದರೆ ನಿಜ.

ನಿಪಿ.1 ರಂತೆ ಖರೀದಿ ಪತ್ರ ಬರೆದುಕೊಡುವಂತೆ ವಾದಿ ನಮಗೆ ವಕೀಲರ ಮೂಲಕ ನೋಟೀಸು ನೀಡಿರುತ್ತಾಳೆಂದರೆ ನಿಜ. ಅದಕ್ಕೆ ನಾವು ನಿಪಿ.6 ರಂತೆ ಪ್ರತ್ಯುತ್ತರ ನೀಡಿರುತ್ತೇವೆ ಎಂದರೆ ನಿಜ. ನಮ್ಮ ತಂದೆ ವಾದಿಯಿಂದ ಪಡೆದ 4 ಲಕ್ಷ ರೂ.ಗಳಿಗೆ ಭದ್ರತೆಗಾಗಿ ನಿಪಿ.1 ನ್ನು ಬರೆದುಕೊಟ್ಟಿದ್ದು ಹಾಗೂ ಸದರಿ ಹಣವನ್ನು ನಾವು ಬಡ್ಡಿ ಸಹಿತ ವಾದಿಗೆ ಮರಳಿ ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿ ನಮ್ಮ ತಂದೆಯಿಂದ ಮೋಸದಿಂದ ನಿಪಿ.1 ನ್ನು ಬರೆಸಿಕೊಂಡಿರುತ್ತಾಳೆಂದು ಅವಳ ವಿರುದ್ಧ ಪೊಲೀಸ್ ಠಾಣೆಗೆ ದೂರು ಕೊಡುವುದಾಗಲೀ ಅಥವಾ ನ್ಯಾಯಾಲಯದ ಮುಂದೆ ಖಾಸಗಿ ಫಿರ್ಯಾದಿಯನ್ನಾಗಲೀ ಸಲ್ಲಿಸಿರುವುದಿಲ್ಲ.

ವಾದಿಗೆ ಸಾಕಷ್ಟು ಜಮೀನು ಹೊಂದಿದ್ದು, ಅದರಿಂದ ಸಾಕಷ್ಟು ಉತ್ಪನ್ನ ಬರುತ್ತದೆಂದರೆ ನಿಜ. ದಾವಾ ಆಸ್ತಿಯನ್ನು ನಮ್ಮ ತಂದೆ ಖರೀದಿ ಹಿಡಿದಿರುತ್ತಾರೆ. ನಮ್ಮ ತಂದೆ ನಿಪಿ.1 ರಂತೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿ ಕೊಂಡು ರೂ. 08 ಲಕ್ಷ ಹಣವನ್ನು ಪಡೆದಿದ್ದರೂ ಸಹ ತಾನು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿದರೆ ನಿಜಾಂಶ ಗೊತ್ತಾಗುತ್ತದೆಂದು ತಿಳಿದು ನನ್ನ ಮೂಲಕ ಸಾಕ್ಷ್ಯ ಮಾಡಿಸುತ್ತಿದ್ದಾರೆಂದರೆ ಸರಿಯಲ್ಲ.

ದಾವಾ ಆಸ್ತಿ ನೀರಾವರಿ ಜಮೀನು ಆಗಿದ್ದು, ಅದರಿಂದ ಸಾಕಷ್ಟು ಆದಾಯ ಬರುತ್ತದೆಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿಲ್ಲ. ಅದೇ ರೀತಿ ನಮ್ಮ ಕುಟುಂಬಕ್ಕೆ ಸಾಕಷ್ಟು ಆದಾಯ ಇರುತ್ತದೆಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿಲ್ಲ.

ನಮ್ಮ ಕುಟುಂಬದಲ್ಲಿ ನಮ್ಮ ತಂದೆ ತಾಯಿ, ಮೂವರು ಜನ ಅಣ್ಣತಮ್ಮಂದಿರರು ಹಾಗೂ ಮಕ್ಕಳು ವಾಸವಾಗಿರುತ್ತೇವೆ. ನಮ್ಮ ಅಣ್ಣನ ಮಗ ಈಗ 02 ವರ್ಷಗಳಿಂದ ನೌಕರಿ ಮಾಡುತ್ತಿದ್ದಾನೆ. ನಮ್ಮ ಕುಟುಂಬದಲ್ಲಿ ಬಹಳ ಜನ ಸದಸ್ಯರಿದ್ದು, ಸಾಕಷ್ಟು ಆದಾಯ ಇರದೇ ಇದ್ದ ಕಾರಣ ಕುಟುಂಬದ ಅಡಚಣೆಗಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಲು ನಿಪಿ.1 ರಂತೆ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ವಾದಿಗೆ ನಿಪಿ.1 ರಂತೆ ಖರೀದಿ ಪತ್ರವನ್ನು ಬರೆದುಕೊಡಬಾರದೆಂಬ ದುರುದ್ದೇಶದಿಂದ ನಮ್ಮ ತಂದೆಯಿಂದ ಒಟ್ಟು ಮುಕ್ತಿಯಾರ ಪತ್ರವನ್ನು ಪಡೆದುಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು ಹೊರತುಪಡಿಸಿ ನಮಗೆ ಬೇರೆ ಯಾವುದೇ ಪಿತ್ರಾರ್ಜಿತ ಆಸ್ತಿ ಇರುವುದಿಲ್ಲ. ದಾವಾ ಆಸ್ತಿಯು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಯಾಗಿದ್ದು, ನಮ್ಮ ಕುಟುಂಬದ ನಿರ್ವಹಣೆಗಾಗಿ ಹಣದ ಅವಶ್ಯಕತೆ ಇರುವ ಕಾರಣ ನಿಪಿ.1 ರಂತೆ ಖರೀದಿ ಕರಾರು ಪತ್ರ ಬರೆದುಕೊಟ್ಟಿರುತ್ತಾನೆಂದರೆ ಸರಿಯಲ್ಲ. ವಾದಿ ಬಡ್ಡಿ ವ್ಯವಹಾರ ಮಾಡುವ ಬಗ್ಗೆ ನಮ್ಮ ಬಳಿ ದಾಖಲೆಗಳು ಇರುತ್ತವೆ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ವಾದಿ ಕಾನೂನುಬಾಹಿರವಾಗಿ ಜನರಿಗೆ ಬಡ್ಡಿ ರೂಪದಿಂದ ಹಣವನ್ನು ಕೊಟ್ಟು ಸುಳ್ಳು ದಾಖಲೆಗಳನ್ನು ಬರೆಸಿಕೊಳ್ಳುತ್ತಾಳೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ವಾದಿಯು ರಾಮಪ್ಪ ಕಲ್ಲಪ್ಪಾ ಅವಲಿ, ಮಲ್ಲಪ್ಪ, ಭೀಮಪ್ಪ, ತಿಪ್ಪಣ್ಣ, ರಾಮಪ್ಪ ತಂದೆ ಕಲ್ಲಪ್ಪ ಇವರಿಂದ ಬಸಪ್ಪ ಪರಪ್ಪ ಮುಗಳಖೋಡ ಮತ್ತು ಹನಮಂತ ಬಸಪ್ಪ ಮುಗಳಖೋಡ ಇವರ ಕಡೆಯಿಂದಲೂ ಸಹ ಖರೀದಿ ಕರಾರು ಪತ್ರ ಬರೆಸಿಕೊಂಡಿರುತ್ತಾರೆಂದರೆ ನಿಜ. ಸದರಿ ಮೂರು ಖರೀದಿ ಪತ್ರಗಳು ಮನೆತನದ ಅಡಚಣೆ ಸಲುವಾಗಿ ಮಾರಾಟ ಮಾಡುತ್ತಿರುವ ಬಗ್ಗೆ ನೊಂದು ಆಗಿರುತ್ತವೆ ಎಂದರೆ ನಿಜ. ಸದರೀಯವರ ವ್ಯವಹಾರಕ್ಕೂ ಹಾಗೂ ನಮ್ಮ ವ್ಯವಹಾರಕ್ಕೂ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ನಿಜ. ಸಾಕ್ಷಿ ಮುಂದುವರೆದು ವಾದಿ ಬಡ್ಡಿ ವ್ಯವಹಾರ ಮಾಡುವ ಬಗ್ಗೆ ತೋರಿಸಲು ಸದರಿ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಖರೀದಿ ಕರಾರು ಪತ್ರದಲ್ಲಿ ಬಡ್ಡಿ ರೂಪದಿಂದ ಹಣ ಕೊಟ್ಟ ಬಗ್ಗೆ ಒಕ್ಕಣೆ ಇರುವುದಿಲ್ಲ ಎಂದರೆ ನಿಜ. ವಾದಿ ಮನೆತನದ ಗೌರವವನ್ನು ಹಾಳು ಮಾಡುವ ಉದ್ದೇಶದಿಂದ ನ್ಯಾಯಾಲಯದ ಮುಂದೆ ಅವರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ವಾದಿಗೆ ಮರಳಿ ಹಣ ಪಾವತಿ ಮಾಡಿದ ಬಗ್ಗೆ ನಮ್ಮ ಪರವಾಗಿ ಸಾಕ್ಷಿದಾರರನ್ನು ಕರೆಯಿಸಿ ಸಾಕ್ಷ್ಯವನ್ನು ಮಾಡಿಸುತ್ತೇನೆ. ಸದರಿ ಸಾಕ್ಷಿದಾರರು ನಿಪಿ.1ರಲ್ಲಿರುವ ಸಾಕ್ಷಿದಾರರು ಆಗಿರುವುದಿಲ್ಲ. ವಾದಿಗೆ ಖರೀದಿ ಪತ್ರ ಬರೆದುಕೊಡುವುದನ್ನು ತಪ್ಪಿಸಲು ನ್ಯಾಯಾಲಯದ ಮುಂದೆ ಖೊಟ್ಟಿ ಸಂಗತಿಗಳುಳ್ಳ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ.1 ರಂತೆ ವಾದಿಯು ನಮ್ಮ ತಂದೆಗೆ ಕೇವಲ ರೂ.20 ಸಾವಿರಗಳನ್ನು ಕೊಡುವುದು ಬಾಕಿ ಇರುತ್ತದೆಂದರೆ ಸರಿಯಲ್ಲ .

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ